ಶ್ರೀ ಎಸ್. ಆರ್. ಕಂಠಿ.—ಸರ್ಕಾರದವರು ಸಾವಿರ ರೂಪಾಯಿಗಳವರೆಗೆ ಆ ಅಂತದಾನವನ್ನು ಮಿತಿಗೊಳಿಸಲಾಗಿದೆ ಎಂದು ಹೇಳಿದ್ದಾರೆ. ಆದರೆ ಸರ್ಕಾರದ ವಿಚಾರ ಆ ಬಗ್ಗೆ ಏನೆಂಬ ಪ್ರಶ್ನೆ ಇಲ್ಲಲ್ಲ. ಸಾವಿರ ರೂಪಾಯಿಗಳನ್ನು ಕೊಡುವುದು ಕಡಮೆ ಎಂದು ಹೇಳುತ್ತಿರುವುದು ಮಾನ್ಯ ಸದಸ್ಯರ ಅಭಿಪ್ರಾಯ. ಅಂದ ಮೇಲೆ ಈ ವಿಷಯದಲ್ಲಿ ಪುನಃ ಸರ್ಕಾರದ ಅಭಿಪ್ರಾಯವನ್ನೇ ಕೇಳುವುದು ಸರಿಯಾಗಿ ಕಾಣುವುದಿಲ್ಲ.

ಒಬ್ಬ ಸದಸ್ಯರು.—(ಸಿ) ಪ್ರಶ್ನೆಗೆ ಉತ್ತರವಾಗಿ ಸಾಕಷ್ಟು ಪುರಸ್ಕಾರ ಈ ಬಗ್ಗೆ ದೊರೆಯಬಹುದು ಎಂದು ಹೇಳಿದ್ದಾರೆ. ಯಾವ ಯಾವ ಜಿಲ್ಲೆಗಳಲ್ಲಿ ಎಷ್ಟೆಷ್ಟು ನ್ಯೂಲುಗಳಿಂದ ರೆಸ್‌ಪಾನ್ಸ್ ಬಂದಿದೆ ?

ಶ್ರೀ ಎಸ್. ಆರ್. ಕಂಠಿ.—ಆ ಮಾಹಿತಿಯನ್ನು ತರಿಸಿಕೊಡುತ್ತೇನೆ.

Providing of drinking water facilities to Katkola Village in Ramdurg Taluk.

*Q.—124. **Sri VEERABHADRAPPA ERAPPA** (Yelburga).—

Will the Government be pleased to state :—

(*a*) whether they are aware that drinking water facilities are not available in Katkola village Ramdurg Taluk, Belgaum District, which has population of over 5,000 ;

(*b*) whether it is not a fact that an estimate has been prepared by the Public Works Department in respect of supply of drinking water to the above village ;

(*c*) whether it is also a fact that the Panchayats and Taluk Development Boards have requested Government to sanction loan in this behalf ;

(*d*) if so, the reasons for not sanctioning the loan so far ;

(*e*) whether it is not their police to provide drinking water facilitiys through taps in places having a population of over 5,000 ?

*A.—**Sri RAMAKRISHNA HEGDE** (Minister for co-operation and Development).—

(*a*) Water supply is available though not in adequate measure.

(*b*) Yes, the estimated amount is Rs. 1,42,909.

(*c*) No loan application as required under the Loans to Panchayats by Taluk Boards (Procedure) Rules has been received by Government.

(*d*) Does not arise.

(*e*) In such cases, the policy is to provide the facility if the Village Panchayat is willing to bear the entire cost.

ಶ್ರೀ ವೀರಭದ್ರಪ್ಪ ಈರಪ್ಪ.—ನನ್ನ (ಬ) ಪ್ರಶ್ನೆಗೆ ಉತ್ತರವಾಗಿ ಅಂದಾಜಿನ ಮೊಬಲಗು ೧,೪೨,೯೦೯ ರೂಪಾಯಿಗಳೆಂದು ಹೇಳಿದ್ದೀರಿ. ಇದನ್ನು ಯಾವ ಆಧಾರದಿಂದ ಮಾಡಲಾಗಿದೆ ?

†ಶ್ರೀ ರಾಮಕೃಷ್ಣ ಹೆಗ್ಗಡೆ.—ವಿಲೇಜ್ ಪಂಚಾಯತಿ ಏರಿಯಾದಲ್ಲಿ ವಾಟರ್‌ಸಪ್ಲೈ ಸ್ಕೀಂ ಬೇಕಾದರೆ ಅಲ್ಲಿ ೫ ಸಾವಿರಕ್ಕಿಂತ ಕಡಮೆ ಜನಸಂಖ್ಯೆ ಇದ್ದರೆ ಅಂತಹ ಕಡೆ ನ್ಯಾಷನಲ್ ವಾಟರ್ ಸಪ್ಲೈ ಸ್ಕೀಂ ಅನ್ವಯಿಸುತ್ತದೆ. ಅದಕ್ಕೂ ಹೆಚ್ಚಿದ್ದರೆ ವಿಲೇಜ್ ಪಂಚಾಯತಿಯವರು ಸರ್ಕಾರದಿಂದ ಸಹಾಯಧನವನ್ನು ರೂಲ್ಸ್ ಪ್ರಕಾರ ಪಡೆಯುವುದಕ್ಕೆ ಅರ್ಹರಾಗುವುದಿಲ್ಲ. ಹಿಂದೆ ಈ ಬಗ್ಗೆ ರೆಪ್ರಸಂಟೇಷನ್ನನ್ನು ಕೊಟ್ಟಿದ್ದರು. ಎಸ್ಟಿಮೇಟು ಪ್ರಕಾರ ಸರ್ಕಾರದ ಆದೇಶವೂ ಹೋಗಿತ್ತು ; ಎಸ್ಟಿಮೇಟು ಸಹ ಆಗಿದೆ. ರೂಲ್ಸ್ ಪ್ರಕಾರ ಯಾವ ರೀತಿ ಅಪ್ಲಿಕೇಷನ್ ಬೇಕೋ ಆರೀತಿ ಅಪ್ಲಿಕೇಷನ್ ಇದುವರೆಗೂ ಬಂದಿಲ್ಲ.

ಶ್ರೀ ವೀರಭದ್ರಪ್ಪ ಈರಪ್ಪ.—ಹಾಗಾದರೆ ಈಗ ಅವರು ಅದನ್ನು ಯಾವ ರೀತಿ ಪೂರೈಸುವುದಕ್ಕಾಗುತ್ತದೆ ?

ಶ್ರೀ ರಾಮಕೃಷ್ಣ ಹೆಗ್ಗಡೆ.—ವಿಲೇಜ್ ಪಂಚಾಯತಿಯವರು ತಾಲ್ಲೂಕ್ ಬೋರ್ಡಿನ ಮುಖಾಂತರ ಸರ್ಕಾರಕ್ಕೆ ಅರ್ಜಿ ಹಾಕಿದರೆ ಸರ್ಕಾರದವರು ತಾಲ್ಲೂಕ್ ಬೋರ್ಡಿಗೆ ಸಾಲದ ರೂಪವಾಗಿ ಹಣವನ್ನು ಕೊಡುತ್ತಾರೆ.

ಶ್ರೀಮತಿ ಬನವರಾಜೇಶ್ವರಿ.—ನಮ್ಮ ಭಾಗಕ್ಕೆ ನ್ಯಾಷನರ್ ರೂರರ್ ವಾಟರ್ ಸಪ್ಲೈ ಸ್ಕೀಂ ಅನ್ವಯಿಸುವುದಿಲ್ಲವೇ ?

ಶ್ರೀ ರಾಮಕೃಷ್ಣ ಹೆಗ್ಗಡೆ.—ಇಲ್ಲ. ಅದಕ್ಕೆ ಉತ್ತರವನ್ನು ವಿವರವಾಗಿ ಆಗಲೇ ಹೇಳಿದ್ದೇನೆ.

Wells constructed under N.E.S. in Tumkur Taluk.

*Q.—133. **Sri K. LAKKAPPA** (Hebbur).—

Will the Government be pleased to state :—

the number of wells constructed under the N.E.S. in Tumkur Taluk ?

*A.—**Sri RAMAKRISHNA HEGDE** (Minister for co-operation and Development).—

1. Drinking water wells—40.
2. Irrigation wells—169.

ಶ್ರೀ ಕೆ. ಲಕ್ಕಪ್ಪ.—ತುಮಕೂರಿನಲ್ಲಿ ತೋಡಿಸಿದ 169 ಬಾವಿಗಳ ಪೈಕಿ ಎಷ್ಟೆಷ್ಟು ಬಾವಿಗಳಿಗೆ ಎಷ್ಟೆಷ್ಟು ಹಣ ಖರ್ಚಾಗಿದೆ ?

†**Sri RAMAKRISHNA HEGDE.**—About a lakh and 78 thousand rupees.